## 11 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

**ಸಿ.ಸಿ. ನಂಃ 62125/2025**

ಪಿ.ಡಬ್ಲ್ಯೂ.  **01**

ಸಿ.ಡಬ್ಲ್ಯೂ.  **01**

| | |
|---|---|
| ಹೆಸರು | ದೀಪಿಕಾ ವಿ. |
| ತಂದೆಯ ಹೆಸರು | ವಿ.ಆರ್.ಶ್ರೀನಿವಾಸ ರಾವ್ |
| ವಯಸ್ಸು | 32 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಜೆ.ಪಿ.ನಗರ, ಬೆಂಗಳೂರು |
| ಪ್ರಮಾಣೀಕರಿಸಲಾಗಿದೆ | ದಿನಾಂಕಃ **02.08.2025** |

**ಮುಖ್ಯ ವಿಚಾರಣೆ ಹಿ.ಸ.ಸ.ಅ. ರವರಿಂದಃ-**

ಚಾಸಾ-4 ಮತ್ತು 5 ನನ್ನ ತಂದೆ-ತಾಯಿ. ಚಾಸಾ- 6 ಮತ್ತು 7 ನನ್ನ ಮಾವ-ಅತ್ತೆ. ಚಾಸಾ- 8 ಮತ್ತು 9 ನನ್ನ ದೊಡ್ಡಪ್ಪ-ದೊಡ್ಡಮ್ಮ. ಚಾಸಾ-10 ನನ್ನ ಅಣ್ಣ. ಆರೋಪಿ ನನ್ನ ಗಂಡ. ಆರೋಪಿ ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿಲ್ಲ. ವರದಕ್ಷಿಣೆ ಪಡೆದಿಲ್ಲ ಹಾಗೂ ವರದಕ್ಷಿಣೆ ಕಿರುಕುಳ ನೀಡಿಲ್ಲ. ಅವಾಚ್ಯವಾಗಿ ನನ್ನನ್ನು ನಿಂದಿಸಿರುವುದಿಲ್ಲ. ಈ ಬಗ್ಗೆ ನಾನು ದೂರನ್ನು ನೀಡಿಲ್ಲ. ಈಗ್ಗೆ ಸುವಾರು 1 ವರ್ಷದ ಹಿಂದೆ ಕೌಟುಂಬಿಕ ಸಣ್ಣ-ಪುಟ್ಟ ವಿಚಾರಕ್ಕೆ ಸಂಬಂಧಪಟ್ಟಂತೆ ಪೊಲೀಸ್ ಠಾಣೆಗೆ ಹೋದಾಗ 2 ದಾಖಲಾತಿಗಳಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಗೆ 2 ದಾಖಲಾತಿಗಳನ್ನು ತೋರಿಸಿದ್ದು ಸದರಿ 2 ದಾಖಲಾತಿಗಳನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ದೂರು ಮತ್ತು ಮಹಜರ ಆಗಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಹಜರನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಕೆಲವು ದಾಖಲಾತಿಗಳನ್ನು ತೋರಿಸಿದ್ದು ಅವುಗಳನ್ನು

ನೋಡಿ ಗುರುತಿಸಲು ನಿರಾಕರಿಸಿರುತ್ತಾರೆ. ಸಾಕ್ಷಿ ಸ್ವತಃ ಆರೋಪಿತರು ಹಾಗೂ ನಾನು ರಾಜಿಯಾಗಿದ್ದೇವೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಿದೆ)**

**ಪಾಟಿ ಸವಾಲು ಹಿ.ಸ.ಸ.ಅ. ರವರಿಂದಃ**

ಈಗ ಓದಿ ಹೇಳಿದ ನಿ.ಪಿ.1 ರಂತೆ ನನ್ನ ಮದುವೆ ದಿಃ 10.08.2012 ರಂದು ವಿ ಆರ್ ಆರ್ ಕನ್ವೇಷನ್ ಹಾಲ್, ಗುಂಟೂರು, ಆಂದ್ರಪ್ರದೇಶದಲ್ಲಿ ಆರೋಪಿಯೊಂದಿಗೆ ಹಿಂದೂ ಸಂಪ್ರದಾಯದಂತೆ ಮದುವೆಯಾಗಿರುತ್ತದೆ ಎಂದರೆ ಸರಿ. ಮದುವೆ ಕಾಲದಲ್ಲಿ ಆರೋಪಿಯು 5 ಲಕ್ಷ ಹಣ ಹಾಗೂ ಬೆಲೆಬಾಳುವ ಚಿನ್ನದ ಆಭರಣ ವರದಕ್ಷಿಣೆಯಾಗಿ ಪಡೆದುಕೊಂಡು ವಿವಾಹವಾಗಿದ್ದರು ಎಂದರೆ ಸರಿಯಲ್ಲ. ತದನಂತರ ನಾನು ಆರೋಪಿಯೊಂದಿಗೆ ರಾಮಮೂರ್ತಿ ನಗರದ ಟಿ ಸಿ ಪಾಳ್ಯ, ಚಿಕ್ಕರಾಮಯ್ಯ ಲೇಔಟ್ ನಲ್ಲಿ ವಾಸ ಮಾಡುವ ಸಂದರ್ಭದಲ್ಲಿ ಆರೋಪಿತನು ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡಿದ್ದು ನಂತರ ಪ್ರತಿದಿನ ಆರೋಪಿಯು ಸಣ್ಣ-ಪುಟ್ಟ ವಿಚಾರಗಳಿಗೆ ನನ್ನ ಮೇಲೆ ಜಗಳ ಮಾಡಿ ಅವಾಚ್ಯವಾಗಿ ನಿಂದಿಸಿ ಹಾಗೂ ನಾನು ದುಡಿದು ತರುವ ಎಲ್ಲಾ ಸಂಬಳವನ್ನು ಆರೋಪಿತನಿಗೆ ಕೊಡಬೇಕೆಂದು ಜಗಳ ಮಾಡಿ ಅಡಿಗೆ ಮಾಡುವ ಸಮಯದಲ್ಲಿ ಉದ್ದಿನವಡೆ ಮಾಡುವ ಸಮಯದಲ್ಲಿ ಕುದಿಯುವ ಎಣ್ಣೆಯ ಪಾತ್ರೆಯಲ್ಲಿ ಕೈ ಹಾಕು ಕೈ ಸುಟ್ಟು ಹೋಗುತ್ತದೆಯೋ ಇಲ್ಲವೋ ನೋಡೋಣಾ ಎಂದು ಆರೋಪಿಯು ದೈಹಿಕ ಹಾಗೂ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಯು ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆ ಹಣವನ್ನು ತರುವಂತೆ, ಹಣವನ್ನು ತರದಿದ್ದಲ್ಲಿ ವಿಚ್ಚೇದನಾ ನೀಡುವಂತೆ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ.

ಈ ಸಂಬಂಧ ಆರೋಪಿತರ ವಿರುದ್ದ ನಾನು ................................. ವಿನಂತಿಸಿಕೊಳ್ಳುತ್ತೇನೆ ಎಂದು ಈಗ ಓದಿ ಹೇಳಿದಂತೆ ನಿಪಿ-1 ರಂತೆ ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ. ನಂತರ

ದಿನಾಂಕ 03.05.2024 ರಂದು ತನಿಖಾಧಿಕಾರಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ನನ್ನ ಹಾಗೂ ಚಾಸಾ-2 ಮತ್ತು 3 ರವರ ಸಮಕ್ಷಮ ಮಧಾಹ್ನ 1.00 ರಿಂದ 03.00 ರವರೆಗೆ ನಿಪಿ-2 ರಂತೆ ಮಹಜರ ಕ್ರಮ ಜರುಗಿಸಿ ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ರಾಜಿಯಾಗಿರುವ ಕಾರಣ ನಿಪಿ-1 ಮತ್ತು 2 ರಲ್ಲಿರುವ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು** ಶ್ರೀ ಹೆಚ್ ಬಿ ಎಲ್ ವಕೀಲರಿಂದಃ- **ಇಲ್ಲ**

ಮರು ವಿಚಾರಣೆ ಇಲ್ಲ.

**ಓ. ಹೇ. ಕೇ. ಸ. ಇದೆ**

**11 ನೇ ನ್ಯಾಯಾಧೀಶರು.**